ಈ) ಈ ಮಾರುತಿ ವ್ಯಾನುಗಳನ್ನು ಕೊಳ್ಳಲು ಬದಲಾಯಿಸಿದ 16 ಜೀಪ್‌ಗಳನ್ನು ಟೆಂಡರ್-ಕಂ-ಆಕ್ಷನ್‌ಗೆ ಇಡಲಾಯಿತು. ಈ 16 ವಾಹನಗಳಿಗೆ 13ಕ್ಕೆ ಮಾತ್ರ ಸರಿಯಾದ ಹರಾಜು ಬಂದಿದ್ದು ಉಳಿದ 3 ವಾಹನಗಳಿಗೆ ಹರಾಜುದಾರರು ಡಿಪಾಸಿಟ್ ಕಟ್ಟದೇ ಇರುವ ಪ್ರಯುಕ್ತ ಇವುಗಳನ್ನು ತಿರಸ್ಕರಿಸಿ, ಈ ಮೂರು ವಾಹನಗಳನ್ನು ಮರು ಹರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೇಲ್ಕಂಡ 13 ವಾಹನಗಳ ಹರಾಜಿನಿಂದ ಮಹಾನಗರ ಪಾಲಿಕೆಗೆ ಬಂದ ಹಣ 5,69,200-00 ರೂ.ಗಳು. ಉಳಿದ ಕಾರುಗಳನ್ನು ಸಹ ಸದ್ಯದಲ್ಲಿಯೇ ಹರಾಜು ಮಾಡಲಾಗುವುದು.

**ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಇರುವ ಕಲ್ಪತರು ಕಾಲೇಜಿನಲ್ಲಿ ಸಾಮೂಹಿಕ ಅತ್ಯಾಚಾರ ಘಟನೆ ನಡೆದಿರುವುದರ ಕುರಿತು**

2632 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಇರುವ ಕಲ್ಪತರು ಕಾಲೇಜಿನಲ್ಲಿ ಸಾಮೂಹಿಕ ಅತ್ಯಾಚಾರ ಘಟನೆ ನಡೆದಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಈ ಘಟನೆಯಲ್ಲಿ ಎಷ್ಟು ಜನರು ಪಾಲ್ಗೊಂಡಿದ್ದರು ಹಾಗೂ ಅವರನ್ನು ದಸ್ತಗಿರಿ ಮಾಡಲಾಗಿದೆಯೇ?*

ಇ) *ದಸ್ತಗಿರಿಯಾದ ಎಲ್ಲರ ಮೇಲೂ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆಯೇ?*

ಈ) *ಮುಂದೆ ಇಂತಹ ಘಟನೆಗಳನ್ನು ತಡೆಗಟ್ಟಲು ತೆಗೆದುಕೊಳ್ಳುವ ಕ್ರಮ?*

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಇಲ್ಲಾ, ಅಂತಹ ಪ್ರಸಂಗ ನಡೆಯಲಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

**ಕಾವೇರಿ ಮೂರನೇ ಹಂತದ ಯೋಜನೆಗೆ ಇದುವರೆಗೆ ವೆಚ್ಚ ಮಾಡಿರುವ ಹಣ**

2629 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಾವೇರಿ ಮೂರನೇ ಹಂತದ ಯೋಜನೆಗೆ ಇದುವರೆಗೆ ವೆಚ್ಚಮಾಡಿರುವುದೆಷ್ಟು?*

ಆ) *ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು?*

ಇ) *ಈ ಯೋಜನೆಗೆ ಸರ್ಕಾರದಿಂದ, ಜೀವವಿಮಾ ಸಂಸ್ಥೆಯಿಂದ, ಕೇಂದ್ರ ಸರ್ಕಾರದಿಂದ, ಬಿ.ಡಿ.ಎ.ಯಿಂದ ಮಹಾನಗರ ಪಾಲಿಕೆಯಿಂದ ಹಾಗೂ ಇತರೆ ಸಂಸ್ಥೆಗಳಾದ ಹುಡ್ಕೋ ಹಾಗೂ ರಕ್ಷಣಾ ಇಲಾಖೆಗಳಿಂದ ಪಡೆದಿರುವಂತಹ ಧನ ಸಹಾಯವೆಷ್ಟು?*

ಈ) *ಈ ಯೋಜನೆಯು ಪೂರ್ಣಗೊಂಡಾಗ ದೊರೆಯುವ ನೀರಿನ ಪ್ರಮಾಣ ದಶಲಕ್ಷ ಲೀಟರ್‌ಗಳಲ್ಲಿ?*

ಉ) *ಈ ಯೋಜನೆಯ ಕಾರ್ಯಗಳು ಮುಗಿಯುವ ಅಂದಾಜಿನ ದಿನಾಂಕ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 15,750 ಲಕ್ಷಗಳು

ಆ) ರೂ. 8,250 ಲಕ್ಷಗಳು.

ಇ) 1) ರಾಜ್ಯ ಸರ್ಕಾರ 4099.39 ಲಕ್ಷಗಳು

ಡಿಬೆಂಡರ್ಸ್ 1603.00 ಲಕ್ಷಗಳು

2) ಜೀವ ವಿಮಾ ಸಂಸ್ಥೆ 4500.00 ಲಕ್ಷಗಳು

3) ಕೇಂದ್ರ ಸರ್ಕಾರ

4) ಬಿ.ಡಿ.ಎ. 1950.00 ಲಕ್ಷಗಳು

5) ಮಹಾನಗರ ಪಾಲಿಕೆ 2550.00 ಲಕ್ಷಗಳು

6) ಇತರೆ ಸಂಸ್ಥೆಗಳು

ಎ) ಹುಡ್ಕೋ 2250.00 ಲಕ್ಷಗಳು

ಬಿ) ರಕ್ಷಣಾ ಇಲಾಖೆ 700.00 ಲಕ್ಷಗಳು

ಈ) 270 ದಶ ಲಕ್ಷ ಲೀಟರ್

ಉ) ಜೂನ್ 1992.

**ರಾಜ್ಯದಲ್ಲಿರುವ ಅಗ್ನಿಶಾಮಕ ದಳದ ಠಾಣೆಗಳು**

2631 - ಶ್ರೀ ಚಿಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿರುವ ಅಗ್ನಿಶಾಮಕ ದಳದ ಠಾಣೆಗಳ ಸಂಖ್ಯೆ ಎಷ್ಟು?*

*ಆ) ಅವುಗಳ ಪೈಕಿ ತುಮಕೂರು ಜಿಲ್ಲೆಯಲ್ಲಿ ಇರುವ ಸಂಖ್ಯೆ ಎಷ್ಟು?*

*ಇ) 1991-92ನೇ ಸಾಲಿನಲ್ಲಿ ಹೊಸದಾಗಿ ಪ್ರಸ್ತಾವಿತ ಅಗ್ನಿಶಾಮಕ ಠಾಣೆಗಳ ಸಂಖ್ಯೆ ಎಷ್ಟು? ಅವುಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಲು ಉದ್ದೇಶಿಸಿದೆ?*

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) 39

ಆ) ತುಮಕೂರು ನಗರದಲ್ಲಿ ಒಂದು

ಇ) 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 18 ಅಗ್ನಿಶಾಮಕ ಠಾಣೆಗಳನ್ನು ತೆರೆಯುವ ಪ್ರಸ್ತಾವನೆಯಿದೆ. ಅವುಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಲಾಗುವುದೆಂಬುದನ್ನು ಸಧ್ಯದಲ್ಲಿ ತೀರ್ಮಾನಿಸಲಾಗುವುದು.

**ರಾಜ್ಯದಲ್ಲಿರುವ ಡಿಸ್ಟಿಲರಿಗಳ ಸಂಖ್ಯೆ ಮತ್ತು ಕಾರ್ಯ**

2729 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ): ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಇಂದಿನವರೆಗೆ ಇರುವ ಡಿಸ್ಟಿಲರಿಗಳ ಸಂಖ್ಯೆ ಎಷ್ಟು? (ಮಾಲಿಕತ್ವದ ವಿವರಗಳನ್ನೊಳಗೊಂಡಂತೆ ಜಿಲ್ಲಾವಾರು ವಿವರಗಳನ್ನು ಒದಗಿಸತಕ್ಕದ್ದು)*